

ಅರಮನೆ ಚರ್ಚ್

(33ನೇ ಪುಟದಿಂದ)

ಏಪ್ರಿಲ್ ನಲ್ಲಿ ವಿಧ ವಿಧವಾದ ಬಣ್ಣಗಳನ್ನುಳ್ಳ ಟ್ಯೂಲಿಪ್ ಗಳ ಹಾಸಿಗೆಯೇ ಇರುತ್ತದೆ. ಈ ಟ್ಯೂಲಿಪ್ ಗಳು ಜನಾಕರ್ಷಣೆಯ ಕೇಂದ್ರವಾಗಿದೆ. ಇಲ್ಲಿ ಪ್ರಾಣಿ ಪಕ್ಷಿಗಳ ಆಕೃತಿಯಲ್ಲಿ ಬೆಳೆಸಿರುವ ಹೂವುಗಳು ಸೂಜಿಗಲ್ಲಿನಂತೆ ನಮ್ಮ ಗಮನವನ್ನು ಸೆಳೆಯುತ್ತವೆ. ಸುಮಾರು 30,000ಕ್ಕೂ ಹೆಚ್ಚು ಸೂರ್ಯಕಾಂತಿ ಹೂಗಳು ಹಾಗೂ 200ಕ್ಕೂ ಹೆಚ್ಚು ತಳಿಗಳಿಂದ ಕೂಡಿದ 20,000ಕ್ಕೂ ಹೆಚ್ಚು ಡೇಲಿಯಾಗಳು ಇಲ್ಲಿವೆ. ಗುಲಾಬಿ ಮತ್ತು ಡೇಲಿಯಾಗಳಲ್ಲಿ ಅತಿ ಹೆಚ್ಚು ಸುಂದರವಾದ ಹೂಗಳನ್ನು 'ಕ್ವೀನ್ ಆಫ್ ರೋಸ್' ಮತ್ತು 'ಕ್ವೀನ್ ಆಫ್ ಡೇಲಿಯಾ' ಎಂದು ಕ್ರಮವಾಗಿ ಆಯ್ಕೆ ಮಾಡುತ್ತಾರೆ. ಇದರ ಪಕ್ಕದಲ್ಲಿಯೇ ಇರುವ ಬಾಳೆ, ಪಾಮ್ ಮರಗಳು, ಕಿತ್ತಳೆ ಮತ್ತು ನಿಂಬೆ ಮರಗಳು ಬೇಸಿಗೆಯಲ್ಲಿ ಹಣ್ಣುಗಳಿಂದ ತುಂಬಿ ಕಂಗೊಳಿಸುತ್ತಿರುತ್ತವೆ. 1997 ರಿಂದ ಶುರುವಾದ 'ಸಿಟ್ರೆಸ್ ಷೋ' ನಲ್ಲಿ 'ಗೋಲ್ಡನ್ ಆಪಲ್'ಗಳ ಸಂಗ್ರಹವನ್ನು ಕಾಣಬಹುದು. ದ್ವೀಪದ ಒಂದು ಭಾಗವನ್ನು ಆಕ್ರಮಿಸಿರುವ ದೈತ್ಯ ಬಂಡೆಯಿಂದ ಹರಿಯುವ ಜಲಪಾತವಂತೂ ನಯನ ಮನೋಹರ.

ಜರ್ಮನಿಯಲ್ಲೇ ಅತಿ ದೊಡ್ಡದು ಎನ್ನಲಾದ 'ಚಿಟ್ಟೆಗಳ ಮನೆ' ಇಲ್ಲಿ ಶುರುವಾಗಿದ್ದು 1996ರಲ್ಲಿ. 20ಕ್ಕೂ ಹೆಚ್ಚು ಜಾತಿಯ ನೂರಾರು ಚಿಟ್ಟೆಗಳು ಪಟಪಟನೆ ರೆಕ್ಕೆಗಳನ್ನು ಬಡಿಯುತ್ತಾ ಹಾರುವುದನ್ನು ನೋಡಲು ಕಣ್ಣೆರಡು ಸಾಲದೇನೋ ಎಂದೆನಿಸುತ್ತದೆ. ಪಾಮ್ ಹೌಸ್ ನಲ್ಲಿ ಸಂರಕ್ಷಿಸಿರುವ ಮರಗಳ ಮಧ್ಯೆ, ಸಣ್ಣ ಸಣ್ಣ ಎಲೆಗಳ ನಡುವೆ ಅಡಗಿ ಚಿಲಿಪಿಲಿಯೆನ್ನುವ ಹಕ್ಕಿಗಳ ನಿನಾದವನ್ನು ಕೇಳುವುದೇ ಕರ್ಣಾನಂದಕರ ಅನುಭವ. ಮಳೆಗಾಲ ಮತ್ತು ಚಳಿಗಾಲದಲ್ಲಿ ಕೂಡ ಈ ದ್ವೀಪ ಆಕರ್ಷಣೆಯ ಕೇಂದ್ರವಾಗಿದೆ. ವಸ್ತು ಪ್ರದರ್ಶನಗಳು ಮತ್ತು ಪಾಶ್ಚಾತ್ಯ ಶಾಸ್ತ್ರೀಯ ಸಂಗೀತದ ಕಛೇರಿಗಳು ವರ್ಷವಿಡೀ ಇರುತ್ತವೆ.

ಕತ್ತಲಾದರೂ ಅಲ್ಲಿಂದ ಹೊರಡಲು ಮನಸ್ಸೇ ಬರಲಿಲ್ಲ. ಜರ್ಮನಿಗೆ ಬಂದದ್ದಕ್ಕೂ ಸಾರ್ಥಕ ಎನಿಸಿತ್ತು. ಒಳ ಹೋಗುವಾಗ ಇದ್ದ ಬೇಸರವೆಲ್ಲಾ ಮಾಯವಾಗಿ, ಹೊರ ಬರುವಾಗ ಖುಷಿಯಿಂದ ಸಾವಿರ ಸಾವಿರ ನೆನಪಿನ ಮೂಟೆಗಳನ್ನು ಹೊತ್ತು ಅಲ್ಲಿಂದ ಹೊರಟೆವು.



ಅರಮನೆ ಚರ್ಚ್ ಒಳಾಂಗಣ